


**ಎಡದಿಂದ ಬಲಕ್ಕೆ**

| | |
|---|---|
| 1. ವಂದಿಸಲು ಬಂದವನ ಬಗೆಗೂ ಇಂಥ ನಿರ್ಲಕ್ಷ್ಯ ಏಕೆ? | 4 |
| 3. ಇದು ಆರೋಗ್ಯಕರ ತಿನಿಸುಗಳ ಬೃಹತ್ ಭಂಡಾರ | 3 |
| 4. ಆ ವೃಕ್ಷದ ಔನ್ನತ್ಯ ಆಕಾಶವನ್ನೇ ಮುಟ್ಟಿದೆ | 3 |
| 6. ಮುಗ್ಗರಿಸಿ ಬಿದ್ದರೂ ಧರಿಸಿದ ಬಟ್ಟೆಯಲ್ಲಿ ಕಿಂಚಿತ್ತೂ ಸುಕ್ಕಿಲ್ಲ | 4 |
| 7. ಅಂಗರಕ್ಷಕರಿಗೆ ಆಗಸದಲ್ಲಿ ಕಂಡಿದ್ದು ಮಂಗಳ ಗ್ರಹ | 4 |
| 9. ರವೀಂದ್ರನ ತೋಟದಲ್ಲಿ ಅರಳಿತ್ತು ಸುಂದರ ತಾವರೆ | 4 |
| 11. ಕಂಡಕಂಡವರ ಬಳಿ ಹಣ ಕೇಳದಂತೆ ತೀವ್ರ ನಿಯಂತ್ರಣ | 4 |
| 13. ಗತ್ಯಂತರಗೊಂಡ ಜನರದ್ದೇ ಬೇರೆ ಒಂದು ದರ್ಜೆ | 4 |
| 15. ಆಮೆಗಳನ್ನು ಕದ್ದ ಮನುಷ್ಯ ಹೆಸರೇ ಇಲ್ಲದವ ಹೌದೇ? | 4 |
| 17. ಗದ್ದಲಗಳಿಂದ ದೂರವಿರುವಂತೆ ಬೈದು ಹೆದರಿಸು | 3 |
| 18. ರಾಜನಿಗಾದರೂ ಬೇಕೇ ಬೇಕು ಮನಸ್ಸಂತಸ | 3 |
| 19. ಹೂಗಿಡಗಳ ಜೊತೆಜೊತೆಯಲ್ಲೇ ಎಷ್ಟೊಂದು ಮೇವಿನ ಸಸ್ಯ! | 4 |

**ಮೇಲಿನಿಂದ ಕೆಳಕ್ಕೆ**

| | |
|---|---|
| 1. ಊರಿಗೆಲ್ಲ ಭಯ ಹಬ್ಬಿಸಿದ್ದು ಹಾವಿನಂತಹ ಪ್ರಾಣಿ | 3 |
| 2. ರಂಗುರಂಗಿನ ಆಕರ್ಷಣೆ ತುಂಬಿದ ಭಾರೀ ಶಹರ | 3 |
| 3. ಆನಂದ ನೀಡುವವರ ಬಗೆಗೆ ಎಲ್ಲೆಡೆ ತುಂಬ ಗೌರವ | 3 |
| 5. ಶನಿವಾರವೂ ಅಷ್ಟೇ; ಇತರೆಲ್ಲ ದಿನಗಳಂತೆಯೇ ಅಸ್ಥಿರ | 3 |
| 7. ಅಂಕಿತ ಹಾಕುತ್ತಿರುವಾಗಲೇ ಹಾಜರಾದ ಯಮ! | 3 |
| 8. ಅರಣ್ಯ ಕಾಯುವವರ ಕೈಯಲ್ಲಿ ಏನೀ ಕಾರ್ಯ ಸಾಧನ? | 3 |
| 9. ಅಂತ್ಯವಿಲ್ಲದ್ದೆಂದರೆ ಇದೊಂದೇ ಪದ | 3 |
| 10. ಹೊರದೂಡಲು ನಿಂತಿರುವವನದು ಎಂಥ ಬೃಹದ್ಗಾತ್ರ! | 3 |
| 12. ಒಳ್ಳೆಯದಾಗಲೆಂದು ನುಡಿಸಿದ್ದು ಪ್ರಸಿದ್ಧ ಮಂಗಳವಾದ್ಯ | 3 |
| 14. ವಾನರರನ್ನೆಲ್ಲ ಸೆರೆಹಿಡಿದು ಬೇರೆಡೆಗೆ ಸಾಗಿಸಿದರೇ? | 3 |
| 15. ಆರೋಹಣದ ಆರಂಭಕ್ಕೆ ತಕ್ಕ ಕಾಲವನ್ನು ತಿಳಿಸಿ ಹೇಳು | 3 |
| 16. ಕರಡಿಯ ಚಿತ್ರದಿಂದ ಅಲಂಕೃತ ಭರಣಿ | 3 |

### 28–8–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಸತ್ಯ 3. ಜವಾನಿ 4. ಜಿಲೇಬಿ 6. ಧನನಿಧಿ 7. ಪ್ರಾಣವಾಯು 9. ಕಿಡಿಕಾರು 11. ಪರಿಮಳ 15. ಗಡವ 16. ಬುರುಜು 17. ನಕುಲ

**ಮೇಲಿನಿಂದ ಕೆಳಕ್ಕೆ**

1. ಅನಿತ್ಯ 2. ತ್ಯಜಿಸು 3. ಜನನಿ 5. ಬಿನ್ನಾಣ 6. ಧಮಕಿ 8. ಯುಗಳ 10. ಕಾಳಗ 12. ರಿವಾಜು 13. ಪಾವನ 14. ತಂಬುಲ (=ತಾಂಬೂಲ)

**ಪ್ರಶ್ನಾಂಕಣ**

## ಡೆನಿಸೋವನ್ ಯಾರು? ಏನು ವಿಶೇಷ?

ಡೆನಿಸೋವನ್ ಈವರೆಗೆ ಪತ್ತೆಯಾಗಿರುವ ಹತ್ತಾರು ಪೂರ್ವ ಮಾನವ ಪ್ರಭೇದಗಳಂತೆಯೇ, ಎಂದರೆ ಹೋಮೊ ಇರೆಕ್ಟಸ್ (ಚಿತ್ರ 1), ನಿಯಾಂಡರ್ಥಾಲ್ (ಚಿತ್ರ 3) ಇತ್ಯಾದಿಗಳಂತೆಯೇ ಡೆನಿಸೋವನ್ (ಚಿತ್ರ 4) ಕೂಡ ಒಂದು ಪ್ರಾಚೀನ ಮಾನವ ಪ್ರಭೇದ. ಲಕ್ಷಾಂತರ ವರ್ಷಗಳಿಂದ ಧರೆಯಲ್ಲಿದ್ದು ಅಳಿದ ಈ ಪ್ರಭೇದ ಈಗ್ಗೆ ಕೇವಲ ಹದಿನೈದು ವರ್ಷಗಳ ಹಿಂದೆ 2010ರಲ್ಲಿ ಪ್ರಥಮವಾಗಿ ಪತ್ತೆಯಾದದ್ದೇ ಅದರ ಮೊದಲ ವಿಶೇಷ.

2008ರಲ್ಲಿ ರಷ್ಯಾ ದೇಶದ ವಿಜ್ಞಾನಿಗಳು ಸೈಬೀರಿಯಾದ 'ಡೆನಿಸೋವಾ' ಎಂಬ ಪ್ರದೇಶದ ಗುಹೆಯೊಂದರಲ್ಲಿ ಪಳೆಯುಳಿಕೆಗಳಿಗಾಗಿ ಉತ್ಖನನ ನಡೆಸಿದಾಗ ಪ್ರಾಚೀನ ಮಾನವ ಮೂಳೆ ಚೂರೊಂದು ಲಭ್ಯವಾಯಿತು. ಮೂವತ್ತು ಸಾವಿರದಿಂದ ಐವತ್ತು ಸಾವಿರ ವರ್ಷಗಳ ಹಿಂದಿನ ಅವಧಿಯಲ್ಲಿ ಬದುಕಿದ್ದ ಪುರಾತನ ಮನುಷ್ಯನ ಕೈ ಬೆರಳಿನ ಆ ಮೂಳೆ ತುಂಡಿನ ಸಂಪೂರ್ಣ ವಿಶ್ಲೇಷಣೆಯಿಂದ ಆ ಮೂಳೆ ಆವರೆಗೆ ತಿಳಿದೇ ಇಲ್ಲದಿದ್ದ ಒಂದು ಪ್ರಾಚೀನ ಮಾನವ ಪ್ರಭೇದದ್ದು ಎಂಬುದು ಪತ್ತೆಯಾಯಿತು. ಆ ಪ್ರಭೇದಕ್ಕೆ ಡೆನಿಸೋವನ್ ಮನುಷ್ಯ (ಹೋಮೊ ಡೆನಿಸೋವಾ) ಎಂದೇ ಹೆಸರಿಡಲಾಯಿತು.

ಅದೇ ಅಧ್ಯಯನದಿಂದ ಡೆನಿಸೋವನ್ ಮನುಷ್ಯರು ಜೈವಿಕವಾಗಿ ನಾಲ್ಕು ಲಕ್ಷ ವರ್ಷಗಳಿಂದ ನಲವತ್ತು ಸಾವಿರ ವರ್ಷ ಹಿಂದಿನ ಅವಧಿಯಲ್ಲಿ ಭೂಮಿಯಲ್ಲಿದ್ದ ನಿಯಾಂಡರ್ಥಾಲ್ ಮನುಷ್ಯ (ಚಿತ್ರ 3) ರ ಅತಿ ಹತ್ತಿರದ ಸಂಬಂಧಿಗಳೆಂಬುದೂ ಪತ್ತೆಯಾಯಿತು. ವಾಸ್ತವ ಏನೆಂದರೆ ನಿಯಾಂಡರ್ಥಾಲ್ ಮತ್ತು ಡೆನಿಸೋವನ್ ಪ್ರಭೇದಗಳು ಆಧುನಿಕ ಮನುಷ್ಯರ ಎಂದರೆ ಹೋಮೊ ಸೇಪಿಯನ್ನರ ಮೂಲ ಪೂರ್ವಜ ವಂಶಕ್ಕೇ ಸೇರಿದ್ದು ಆ ವಂಶಾವಳಿಯಿಂದ 5.5 ರಿಂದ 7.65 ಲಕ್ಷ ವರ್ಷ ಕವಲೊಡೆದು ಪ್ರತ್ಯೇಕಗೊಂಡವು. ಅಲ್ಲಿಂದ ಮುಂದೆ ಈಗ್ಗೆ 3.8 ರಿಂದ 4.7 ಲಕ್ಷ ವರ್ಷ ಹಿಂದಿನ ಅವಧಿಯಲ್ಲಿ ನಿಯಾಂಡರ್ಥಾಲ್ ಮತ್ತು ಡೆನಿಸೋವನ್ ಪ್ರಭೇದಗಳು ಬೇರ್ಪಟ್ಟು ಬೇರೆ ಬೇರೆ ಹಾದಿ ಹಿಡಿದವು. ಹಾಗೆಂದರೆ ಇವೆರಡೂ ಪ್ರಭೇದಗಳು ನಮಗೆ ನಿಕಟ ಸಂಬಂಧಿಗಳೆಂಬುದು ಸ್ಪಷ್ಟ ತಾನೇ?

ಅದೇನೇ ಇದ್ದರೂ ಡೆನಿಸೋವನ್‌ಗಳ ಪಳೆಯುಳಿಕೆಗಳು ಲಭ್ಯವಾಗಿರುವುದು ಬಹಳ ವಿರಳ. 2018ರಲ್ಲಿ ಮಾನವ ಶಾಸ್ತ್ರಜ್ಞರ ಕೈಸೇರಿದ ಡೆನಿಸೋವನ್ನರ ಒಂದು ತಲೆಬುರುಡೆಯೇ ಈ ಪ್ರಭೇದದ ಈವರೆಗಿನ ಅತ್ಯಮೂಲ್ಯ ಪಳೆಯುಳಿಕೆ (ಅದರ ಆಧಾರದಿಂದ ರಚಿಸಲಾದ ಡೆನಿಸೋವನ್ ಮನುಷ್ಯನ ಸ್ವರೂಪ ಚಿತ್ರ 4ರಲ್ಲಿದೆ). ಈವರೆಗೂ ಡೆನಿಸೋವನ್ ಪಳೆಯುಳಿಕೆಗಳು ಸೈಬೀರಿಯಾ, ಟಿಬೆಟ್, ಚೀನಾ, ಥೈವಾನ್ ಮತ್ತು ಲಾವೋಸ್ ದೇಶಗಳ ನೆಲಗಳಲ್ಲಿ ದೊರಕಿವೆ. ಆಧುನಿಕ ಮಾನವರ ಜೊತೆಜೊತೆಗೇ ಬದುಕಿದ್ದ ನಿಯಾಂಡರ್ಥಾಲ್ ಮತ್ತು ಡೆನಿಸೋವನ್ ಪ್ರಭೇದಗಳು ಹೋಮೊ ಸೇಪಿಯನ್ನರೊಡನೆ ಸ್ಪರ್ಧಿಸಲಾಗದೆ ನಲವತ್ತು ಸಾವಿರ ವರ್ಷಗಳ ಹಿಂದಿನ ಸುಮಾರಿಗೆ ಸಂಪೂರ್ಣ ಅಳಿದುಹೋದುವು.




**ಎನ್. ವಾಸುದೇವ್**